## 24ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು

## ಸಿಸಿ ನಂ.19088/2022

**ಪ್ರಾ.ಸಾಃ 6 ಚಾ.ಸಾಃ 7**

| | |
|---|---|
| **ಸಾಕ್ಷಿದಾರರ ಹೆಸರು** | ಭಾರತಿ ಆರ್ |
| **ಗಂಡನ ಹೆಸರು** | ನಾಗರಾಜ್ |
| **ವಯಸ್ಸು** | 53 ವರ್ಷ |
| **ಉದ್ಯೋಗ** | ಪಿಎಸ್ಐ , ಇಸ್ಟ್ ಮಹಿಳಾ ಪೋ.ಠಾ. ಬೆಂಗಳೂರು. |
| **ವಿಳಾಸ** | ಪದ್ಮನಾಭನಗರ , **ಬೆಂಗಳೂರು** |

**ದಿನಾಂಕಃ 06.10.2026. ರಂದು ಸಾಕ್ಷಿಗೆ ಶಪಥ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಹಿ.ಸ.ಸ.ಅ ರವರಿಂದಃ**

ನಾನು ಜೂನ್ 2018 ರಿಂದ ಜೂನ್ 2023 ರ ವರೆಗೆ ಪಿ.ಎಸ್.ಐ.ಯಾಗಿ ಬಸವನಗುಡಿ ಮಹಿಳಾ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 11.02.2022 ರಂದು ಬೆಳಿಗ್ಗೆ 12.30 ಗಂಟೆಗೆ ನಾನು ಠಾಣೆಯಲ್ಲಿದ್ದಾಗ ಚಾಸಾ.1 ರವರು ಠಾಣೆಗೆ ಹಾಜರಾಗಿ ದೂರನ್ನು ನೀಡಿದ್ದು, ಅದನ್ನು ನಮ್ಮ ಠಾಣಾ ಗುನ್ನಾ ನಂ.46/2022 ಕಲಂ 4989ಎ 506 ಸಹ ಕಲಂ 34ರ ಐಪಿಸಿ ಹಾಗೂ ಕಲಂ 3 ಮತ್ತು 4 ಡಿಪಿ ಕಾಯ್ದೆ ಅಡಿಯಲ್ಲಿ ಪ್ರಕರಣವನ್ನು ದಾಖಲಿಸಿ, ಪ್ರ.ವ.ವ. ದಾಖಲಿಸಿ ಮಾನ್ಯ ನ್ಯಾಯಾಲಯ ಹಾಗೂ ನಮ್ಮ ಮೇಲಾದಿಕಾರಿಗೆ ಕಳುಹಿಸಿಕೊಟ್ಟಿರುತ್ತೇನೆ.

ಅದೇ ದಿನ ದೂರುದಾರರಿಗೆ ಕಲಂ 91 ದ.ಪ್ರ.ಸ ರಲ್ಲಿ ನೋಟೀಸನ್ನು ನೀಡಿರುತ್ತೇನೆ. ದಿಃ 12.12.2022 ರಂದು ಪಿರ್ಯಾದಿದಾರರು ತೋರಿಸಿದ ಸ್ಥಳದಲ್ಲಿ ಪಂಚನಾಮೆಯನ್ನು ಚಾಸಾ.5 ಮತ್ತು 6 ರವರ ಸಮಕ್ಷಮ ಮಧಾಹ್ನ 2.00 ರಿಂದ 2.30 ಗಂಟೆಯವರೆಗೆ ಜರುಗಿಸಿರುತ್ತೇನೆ. ಅದೇ ದಿನ ಚಾಸಾ.5 ಮತ್ತು 6 ರವರಿಗೆ ನೋಟೀಸನ್ನು ನೀಡಿರುತ್ತೇನೆ. ಅದೇ ದಿನ ಚಾಸಾ.1 ರವರು ನಿಖಾ ನಾಮ, ಮದುವೆ ಛಾಯಚಿತ್ರ ಹಾಗೂ ಮದುವೆ ಆಮಂತ್ರಣ ಹಾಜರು ಪಡಿಸಿರುತ್ತೇನೆ. ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ.8 ರವರಿಗೆ ನೀಡಿರುತ್ತೇನೆ.

ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು **ನಿಪಿ.3** ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು **ನಿಪಿ.3ಎ** ಎಂದು ಗುರುತಿಸಲಾಯಿತು. ಸಾಕ್ಷಿಯು ಪಂಚನಾಮೆ ಈಗಾಗಲೇ **ನಿಪಿ.1** ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು **ನಿಪಿ.1ಬಿ** ಎಂದು ಗುರುತಿಸಲಾಯಿತು. ನಿಖಾ ನಾಮದ ಜೆರಾಕ್ಸ್ ಪ್ರತಿಯನ್ನು **ನಿಪಿ.4** ಎಂದು ಗುರುತಿಸಲಾಯಿತು. 7 ಛಾಯಚಿತ್ರಗಳನ್ನು **ನಿಪಿ.5 ರಿಂದ 11** ಎಂದು ಗುರುತಿಸಲಾಯಿತು.

**ಪಾಟಿ ಸವಾಲುಃ ಆರೋಪಿ ಪರ ವಕೀಲರರಿಂದಃ**

ನಿಪಿ.3 ದೂರನ್ನು ಚಾಸಾ.1 ರವರೇ ಟೈಪ್ ಮಾಡಿಕೊಂಡು ಬಂದಿದ್ದರು. ಅವರು ಜೊತೆ ಮತ್ತೆ ಯಾರು ಬಂದಿರುತ್ತಾರೆಂದು ನನಗೆ

ಗೊತ್ತಿರುವುದಿಲ್ಲ. ಫಿರ್ಯಾದಿದಾರರು ಪುನಃ ಹೇಳಿಕೆಯನ್ನು ನನ್ನ ಬಳಿ ನೀಡಿರುವುದಿಲ್ಲ. ಚಾಸಾ.1 ರವರಿಂದ ದೂರನ್ನು ಪಡೆದುಕೊಂಡು ಪ್ರಕರಣವನ್ನು ದಾಖಲಿಸಿರುತ್ತೇನೆ. ಪಂಚರನ್ನು ನಾವೇ ಪಾದರಾಯನಪುರದಿಂದ ಬರಮಾಡಿಕೊಂಡಿರುತ್ತೇವೆ. ಪಂಚರು ಆರೋಪಿತರಿಗೆ ಸಂಬಂಧಿಕರು ಎಂದರೆ ಸರಿಯಲ್ಲ. ನಿಪಿ.1 ಅನ್ನು ನನ್ನ ಸಿಬ್ಬಂದಿ ಯಶೋಧ ರವರು ಬರೆದಿರುತ್ತಾರೆ. ಪಂಚನಾಮೆಯನ್ನು ಠಾಣೆಯಲ್ಲಿ ಜರುಗಿಸಿದ್ದು ಇರುತ್ತದೆ ಎಂದರೆ ಸರಿಯಲ್ಲ. ಪಂಚನಾಮೆಯಲ್ಲಿರುವ ಅಂಶಗಳನ್ನು ಪಂಚರಿಗೆ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ದೂರನ್ನು ಪರಿಶೀಲನೆ ಮಾಡದೆ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ.**

(ತೆರೆದ ನ್ಯಾ.ದಲ್ಲಿ ನನ್ನ ಉತ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇ.ಓ**

**24ನೇ ಅ.ಮು.ಮ.ದಂ.ನ್ಯಾ.**